## ನನ್ನ ಓದು

"ಯಾವುದೋ ಮರದ ಮೇಲೆ ಬೆಳಕು
ಬಳ್ಳಿಯಂತೆ ಹರಡಿರುವುದನ್ನು ಕಂಡೆನು"
"ಕೆಲವರು ತೀರ್ಥಕ್ಷೇತ್ರದ ಕಾಗೆಗಳ ಹಾಗೆ
ಕಾಯುತ್ತ ಕೂತಿದ್ದಾರೆ."
"ಕೈಯಲ್ಲಿ ಸಾಮಾನ್ಯ ಬಳೆ
ನೋಡಲು ಅಸಾಧಾರಣ ಸುಂದರಿ."
"ಸಾವು ಸನ್ನಿಹಿತವಾದಾಗ ತೋರುವ ಸಿಡುಕಿನಂತೆ!"

ಇಡೀ ಕಾದಂಬರಿ ಇಂಥ ಸುಲಲಿತ ಅಚ್ಚ ಕನ್ನಡದಲ್ಲಿ ಪ್ರವಹಿಸುತ್ತದೆ. ಅಪು ಎನ್ನುವ ಮುಗ್ಧ ಅಮಾಯಕ ಜ್ಞಾನಾರ್ಥಿಯ, ಸತ್ಯಾರ್ಥಿಯ ಬಾಳಿನ ಚಾರಣದ ಕಥನ ಇದು. ವಿದ್ಯಾರ್ಥಿ ಅಪು, ನಂತರ ವಿವಾಹಿತ ಅಪು, ನಂತರ ತಂದೆ ಅಪು...

ಸ್ವಾತಂತ್ರ್ಯಪೂರ್ವ ದಿನಗಳು, ಕಡುದಾರಿದ್ರ್ಯ, ಮೌಢ್ಯ, ಮಬ್ಬು, ಅಸಮಾನತೆ, ಕಗ್ಗತ್ತಲು, ಇವೆಲ್ಲವುಗಳ ನಡುವೆ ಅಜ್ಞಾತದ ವಿರಾಟ್ ಸೆಳೆತ, ಪ್ರಕೃತಿಯ ಮುಕ್ತಲೀಲೆ, ಕೇವಲ ತ್ಯಾಗಮಯಿ ತಾಯಿ, ಅಕ್ಕ, ತಂಗಿ, ಮಡದಿ, ಸಖಿ, ಆಗಲೆಂದೇ ಹುಟ್ಟಿ ಬಾಳು ಸವೆಸುವ ಹೆಂಗಳೆಯರು, (ವಿರೋಧಾಭಾಸ ಎಂಬಂತೆ ಅವರಿಗೆ ಸರ್ವಜಯಾ, ಪ್ರೀತಿಬಾಲಾ, ಕುಸುಮಲತಾ, ಇಚ್ಛಾಮತಿ... ಎಂಥ ಸುಂದರ ಹೆಸರುಗಳು!), 'ವಾರಗಟ್ಟಲೆ ಕೇವಲ ಮೈದಾ ಹಿಟ್ಟು ಬೇಯಿಸಿ ತಿಂದೇ ಹಸಿವು ಹಿಂಗಿಸಿಕೊಳ್ಳುವ ಕಡು ಬಡ ವಿದ್ಯಾರ್ಥಿಗಳು, ಶಾಲೆ-ಕಾಲೇಜುಗಳ ಚರ್ಚಾಕೂಟಗಳಲ್ಲಿ 'ಬಾಲ್ಯ ವಿವಾಹದ ಔಚಿತ್ಯವನ್ನು' ಪ್ರಶ್ನಿಸುವವರನ್ನು 'ಸ್ತ್ರೀ ಸ್ವಾತಂತ್ರ್ಯದ ಪರವಾಗಿ' ಮಾತನಾಡುವವರನ್ನು 'ದೇಶದ್ರೋಹಿ, ಸಮಾಜ ದ್ರೋಹಿ' ಎಂದು ಹೀಯಾಳಿಸಿ ಲೇವಡಿ ಮಾಡುವವರು... ರೈಲು ನಿಲ್ದಾಣಗಳಲ್ಲಿ ಪ್ಯಾಸೆಂಜರುಗಳಿಗೆ ಒಲೆ ಹಚ್ಚಿ ಅನ್ನ ಬೇಯಿಸಿಕೊಳ್ಳಲು ಇರುವ ತಡಿಕೆಯ ಗುಡಿಸಲುಗಳು, ಅಲ್ಲಿ ನವವಧುವನ್ನು ರೊಟ್ಟಿ ಮಾಡಲು ಹಚ್ಚಿ 'ನೀನು ತಿಂದೆಯಾ?' ಎಂದು ಪ್ರಶ್ನೆಯನ್ನೇ ಕೇಳದೆ ಎಲ್ಲ ಮುಕ್ಕುವ ಮದುಮಗ... ಹೀಗೆ ಇದೊಂದು ಅದ್ಭುತ ವಿರಾಟ್ ಮನುಜ ಕಥನ. ಅಹೋಬಲರು ತಮ್ಮ ಸಂವೇದನೆಯಲ್ಲಿ ಇದನ್ನು ಕನ್ನಡಿಸಿರುವುದನ್ನು ಓದಿಯೇ ಅನುಭವಿಸಬೇಕು. 'ಅಪರಾಜಿತ' ಎಂದರೆ ಬಂಗಾಳಿಯಲ್ಲಿ 'ಶಂಖಪುಷ್ಪ' ಕೂಡ!

ಹಳ್ಳಿಯ ಮಾಸ್ತರರಿಗೆ ಕಾಣುವ ವಿದ್ಯಾರ್ಥಿ ಅಪುವಿನ ಚಿತ್ರಣ ನೋಡಿ:

"ಹೆಡ್ ಮಾಸ್ತರು ಮನಸಲ್ಲೇ ಅಂದುಕೊಂಡರು, ಈ ಮೂವತ್ತು ವರುಷಗಳ ದೀರ್ಘ ಜೀವನದಲ್ಲಿ ಇಂಥ ಹುಡುಗನನ್ನವರು ಎಂದೂ ಕಂಡಿಲ್ಲ. ಇಷ್ಟು ಭಾವಮಯ, ಸ್ವಪ್ನವಿಹಾರಿಯಾದ ಹುಡುಗ, ನಿಸ್ಸಹಾಯ, ನಿರ್ಗತಿಕನಾದರೂ ಆಕರ್ಷಕ. ಸ್ವಲ್ಪ ಮುಗ್ಧನಂತೆ ಕಂಡರೂ ಬುದ್ಧಿವಂತ, ಉದಾರಿ, ನಿಷ್ಪಾಪ ಮನಸ್ಸಿನವ, ಅಲ್ಲದೆ ಅತಿಶಯ ಜ್ಞಾನದ ಹಸಿವಿರುವವನು, ಜ್ಞಾನಕ್ಕಾಗಿ ಅರಸುವವನು. ಈ ಹುಡುಗನ ನೀರವ, ಜಿಜ್ಞಾಸಾಪೂರ್ಣವಾದ ಕಣ್ಣುಗಳು ತಮ್ಮ ಕಡೆಯಿಂದ ಜ್ಞಾನ ಪ್ರವಾಹವನ್ನು ಬಲಪೂರ್ವಕವಾಗಿ ಸೆಳೆದುಕೊಳ್ಳುತ್ತಿದ್ದವು."

"ಅಪೂ, ಕಲಕತ್ತೆಗೆ ಹೋಗು. ಸಣ್ಣ ಸಣ್ಣ ಊರುಗಳ ಕಾಲೇಜುಗಳಲ್ಲಿ ಖರ್ಚೇನೋ ಕಡಿಮೆಯಿರುತ್ತೆ. ಆದರೆ ಅಲ್ಲಿ ಮನಸ್ಸಿಗೆ ಆಹಾರವಿರುವುದಿಲ್ಲ, ಒಳಗಣ್ಣು ತೆರೆಯುವುದಿಲ್ಲ, ನನಗೆ ಕಲಕತ್ತೆಯೇ ಸರಿ ಅನಿಸುತ್ತೆ." ವಿಸ್ಮಯದ ಬಗೆಗೆ ಕಾದಂಬರಿಯಲ್ಲಿ ಬರುವ ಈ ನುಡಿಗಳನ್ನು ನೋಡಿ:

"ವಿಸ್ಮಯವೆನ್ನುವುದು ಮನಸ್ಸಿನ ಅತ್ಯಂತ ಉನ್ನತ ಭಾವ - ಅದಕ್ಕೇ ಅದು ಸುಲಭವಾಗಿ ಲಭ್ಯವಾಗುವುದಿಲ್ಲ. ಸತ್ಯವಾದ ವಿಸ್ಮಯದ ಸ್ಥಾನವು ಮಾನವನ ಉದ್ರೇಕಗಳಲ್ಲೆಲ್ಲಾ ಅತಿ ಮೇಲುಗಡೆ ಇರತಕ್ಕಂಥದು. ಯಾರ ಬುದ್ಧಿ ಅತಿ ಪ್ರಶಸ್ತವೋ, ಉದಾರವೋ, ಯಾರ ಮನಸ್ಸು ಸದಾ ಸತರ್ಕವೋ; ಅಂಥವರು ಹೊಸ ಚಿತ್ರ, ಹೊಸ ಭಾವಗಳನ್ನು ಗ್ರಹಣ ಮಾಡುವ ಸಾಮರ್ಥ್ಯವುಳ್ಳವರಾಗಿರುತ್ತಾರೆ. ಅಂಥವರೇ ಈ ಅಸಾಧಾರಣವಾದ ವಿಸ್ಮಯ ರಸದ ರುಚಿಯನ್ನು ಸವಿಯಲು ಯೋಗ್ಯರು. ಉದಾಸೀನ ಪ್ರಕೃತಿಯವರಿಗೂ ಜಡ ಮನಸ್ಸಿನವರಿಗೂ, ಗೊಣಗಾಡುವ ಬುದ್ಧಿಯುಳ್ಳವರಿಗೂ, ಈ ಪರಿಪೂರ್ಣ ಗಾಢ ವಿಸ್ಮಯದಷ್ಟು ಉಚ್ಚತಮ ಮನೋಭಾವ ಸಾಯುವವರೆಗೂ ಅನುಭವವಾಗದು."

ಈ ಕಾದಂಬರಿಯ ಸತ್ವ ಇರುವುದೇ ಅದರ ಚಿತ್ರಮಯ ಧ್ವನಿಶಕ್ತಿಯಲ್ಲಿ!. "ಬೆಳಗಾಗಿ ಹೋಯಿತು, ಅಪರ್ಣಾ ಇನ್ನು ಏಳೋಣವೆಂದು ಏಳಹೊರಟಳು. ಈ ಮಧ್ಯೆ ಯಾವಾಗಲೋ ಅಪು ಅವಳ ಸೀರೆಯ